Azadi Ka Amrit Mahotsav

# ಹಾಸನ ವಿಶ್ವವಿದ್ಯಾಲಯ

## ಹೇಮಗಂಗೋತ್ರಿ ಹಾಸನ

# HASSAN UNIVERSITY

## HEMAGANGOTHRI HASSAN – 573226


ಕುಲಸಚಿವರ ಕಾರ್ಯಾಲಯ

**Office of the Registrar**

**Email:reg.hassan.uni@gmail.com**

**Landline: 08172-220015**


ನಂ./ಹೆಚ್.ಯು.ಹೆಚ್/ಕು.ಸ.ಕಾ/406/2023-24

ದಿನಾಂಕ: 02-11-2023

## ಪರಿಷ್ಕೃತ ಅಧಿಸೂಚನೆ

ವಿಷಯ : 2023-24 ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕೋತ್ತರ ಕೋರ್ಸುಗಳಿಗೆ ಭರ್ತಿಯಾಗದೆ ಖಾಲಿ ಉಳಿದ ಸೀಟುಗಳ (ಕೇಂದ್ರೀಕೃತ) ಪ್ರವೇಶಾತಿಯ ಬಗ್ಗೆ.

ಉಲ್ಲೇಖ :1. ಈ ಕಛೇರಿ ಇದೆ ಸಮಸಂಖ್ಯೆ ವಿ.ವಿ ಪರಿಷ್ಕೃತ ಅಧಿಸೂಚನೆ-2 ದಿನಾಂಕ: 05-09-2023

2. ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಸಂಯೋಜಕರ/ಸಂಯೋಜಿತ ಕಾಲೇಜುಗಳ/ಪ್ರಾಂಶುಪಾಲಕರುಗಳ/ ವಿದ್ಯಾರ್ಥಿಗಳ ಮನವಿ.
3. ನಂ./ಹೆಚ್.ಯು.ಹೆಚ್/ಕು.ಸ.ಕಾ/406/2023-24 ದಿನಾಂಕ: 31-10-2023
4. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 02-11-2023.

**********

ಉಲ್ಲೇಖಿತ (2)ರ ಮನವಿ ಆಧರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಉಲ್ಲೇಖಿತ(1)ರ ಪರಿಷ್ಕೃತ ಅಧಿಸೂಚನೆ-2ರಲ್ಲಿನ ವೇಳಾಪಟ್ಟಿಯಂತೆ ಪ್ರವೇಶಾತಿ ಪ್ರಕ್ರಿಯೆ ನಡೆದ ನಂತರ ಸೀಟುಗಳು ಭರ್ತಿಯಾಗದೆ ಉಳಿದಿರುವಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. ಅರ್ಜಿಗಳನ್ನು ಹಾಕದೆ ಇರುವಂತಹ ವಿದ್ಯಾರ್ಥಿಗಳು ದಿನಾಂಕ: 02-11-2023 ರಿಂದ 04-11-2023ರೊಳಗೆ ಪ್ರವೇಶಾತಿ ಬಯಸಿದ ಕೋರ್ಸ್‌ಗೆ ಹಾಸನ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವುದು.
2. ಹೊಸದಾಗಿ ಅರ್ಜಿಸಲ್ಲಿಸುವ ವಿದ್ಯಾರ್ಥಿಗಳು ಮಾತ್ರ ರೂ. 1000/- ಗಳನ್ನು ಪಾವತಿಸುವುದು.
3. ಈಗಾಗಲೇ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುವ ಕೋರ್ಸ್‌ಗಳಿಗೆ ಅವರ ಹೆಸರುಗಳನ್ನು ಮತ್ತೆ ಪರಿಗಣಿಸಲಾಗುವುದು. ಆದರೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಆಯಾಯ ವಿಭಾಗದ ಅಧ್ಯಕ್ಷರ ಬಳಿ ತಮ್ಮ ಹೆಸರನ್ನು ಕಡ್ಡಾಯವಾಗಿ ನೋಂದಾಯಿಸಬೇಕು. ಮತ್ತೆ ಅರ್ಜಿ ಹಾಕುವ ಅವಶ್ಯಕತೆಯಿರುವುದಿಲ್ಲ. ಬೇರೆ ಕೋರ್ಸುಗಳಿಗೆ ಪ್ರವೇಶ ಬಯಸಿದ್ದಲ್ಲಿ (ಅರ್ಹತೆಯಿದ್ದಲ್ಲಿ ಮಾತ್ರ) ರೂ. 1000 ಪಾವತಿಸಿ ಅರ್ಜಿಯನ್ನು ಹಾಸನ ವಿಶ್ವವಿದ್ಯಾಲಯಕ್ಕೆ ಹಾಕಬೇಕು.
4. **ಅಧ್ಯಯನ ವಿಭಾಗಗಳ ಪ್ರವೇಶಾತಿ ಸಮಿತಿ ಅಧ್ಯಕ್ಷರು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಪ್ರವೇಶಾತಿ ನೀಡುವುದು.**

    i. ಸ್ಕೀಮ್-'ಎ' ಸೀಟುಗಳು ಖಾಲಿ ಉಳಿದು, ಸ್ಕೀಮ್-'ಬಿ' ಸೀಟುಗಳನ್ನು ಆಪರೇಟ್ ಮಾಡದಿದ್ದಲ್ಲಿ, ಸ್ಕೀಮ್-'ಎ' ಸೀಟುಗಳು ಭರ್ತಿಯಾಗದಿದ್ದಲ್ಲಿ ಸ್ಕೀಮ್-'ಎ' ನಲ್ಲಿಯೇ ಭರ್ತಿ ಮಾಡಿ, ನಂತರ ಸ್ಕೀಮ್-'ಬಿ' ಸೀಟುಗಳನ್ನು ಆಪರೇಟ್ ಮಾಡುವುದು.

    ii. ಸ್ಕೀಮ್-'ಬಿ' ಸೀಟುಗಳು ಆಪರೇಟ್ ಆಗಿ, ಒಂದು ವೇಳೆ ಸ್ಕೀಮ್-'ಎ' ಸೀಟುಗಳು ಖಾಲಿ ಉಳಿದಿದ್ದಲ್ಲಿ, ಅವುಗಳನ್ನು ಸ್ಕೀಮ್-'ಬಿ' ಗೆ ಶಿಫ್ಟ್ ಮಾಡಿ, ಸ್ಕೀಮ್-'ಬಿ' ಅಡಿಯಲ್ಲಿಯೇ ಪ್ರವೇಶಾತಿ ನೀಡುವುದು.

    iii. ದಿನಾಂಕ: 06-11-2023 ರಿಂದ 07-11-2023 ಸಾಯಂಕಾಲ 5:00 ಗಂಟೆಯೊಳಗೆ ಹೊಸದಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ (Verification), ಬದಲಾವಣೆಗಳಿದ್ದಲ್ಲಿ ಅಳವಡಿಸಿ ಪ್ರಕಟಿಸುವುದು.

    iv. ದಿನಾಂಕ: 08-11-2023 ರಂದು ಬೆಳಗ್ಗೆ 10:00 ರಿಂದ 1:00 ಗಂಟೆಯವರೆಗೆ ವಿಭಾಗದಲ್ಲಿರುವ ರಿಜಿಸ್ಟರಿನಲ್ಲಿ ಸಹಿ ಮಾಡಿದ ವಿದ್ಯಾರ್ಥಿಗಳಿಗೆ Casual round ಮಾದರಿಯಲ್ಲಿ ದಿನಾಂಕ: 09-11-2023 ಮತ್ತು 10-11-2023 ರವರೆಗೆ ಪ್ರವೇಶಾತಿಯನ್ನು ನಡೆಸಬೇಕು.

    v. ಸರ್ಕಾರಿ/ಖಾಸಗಿ/ಸಂಯೋಜಿತ/ಸ್ವಾಯತ್ತ ಕಾಲೇಜುಗಳಿಗೆ ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ವರ್ಗವಾರು ಹಾಸನ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಪ್ರವೇಶಾತಿ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶಾತಿ ನೀಡುವುದು.

02/11/23

ಕುಲಸಚಿವರು

**ಕುಲಸಚಿವರು**
ಹಾಸನ ವಿಶ್ವವಿದ್ಯಾಲಯ
ಹೇಮಗಂಗೋತ್ರಿ
ಹಾಸನ-573 226

ಪ್ರತಿ:

1. ಕುಲಸಚಿವರು (ಮೌಲ್ಯಮಾಪನ) ಹಾಸನ ವಿಶ್ವವಿದ್ಯಾಲಯ, ಹಾಸನ.
2. ಹಣಕಾಸು ಅಧಿಕಾರಿಗಳ ಕಛೇರಿ, ಹಾಸನ ವಿಶ್ವವಿದ್ಯಾಲಯ, ಹಾಸನ.
3. ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸುತ್ತಿರುವ ಹಾಸನ ವಿಶ್ವವಿದ್ಯಾಲಯದ ಸಂಯೋಜನೆಗೊಳಪಡುವ ಎಲ್ಲಾ ಸರ್ಕಾರಿ/ಖಾಸಗಿ/ಸ್ವಾಯತ್ತ ಕಾಲೇಜುಗಳ ನಿರ್ದೇಶಕರು/ಪ್ರಾಂಶುಪಾಲರು.
4. ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಹಾಸನ.
5. ಸಮಾಜ ಕಲ್ಯಾಣಾಧಿಕಾರಿಗಳು, ಹಾಸನ.
6. ಜಿಲ್ಲಾಧಿಕಾರಿಗಳು. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಛೇರಿ, ಹಾಸನ.
7. ಮಾನ್ಯ ಕುಲಪತಿಯವರ ಆಪ್ತಕಾರ್ಯದರ್ಶಿಗಳು ಹಾಗೂ ಆಪ್ತ ಸಹಾಯಕರು ಹಾಸನ ವಿಶ್ವವಿದ್ಯಾಲಯ, ಹಾಸನ.
8. ಕಛೇರಿ ಪ್ರತಿ.